ಅಗ್ರಹಾರದಲ್ಲಿ ನೆಮ್ಮದಿಯಾಗಿ ವಿಶ್ರಾಂತಿ ಪಡೆಯುವಿರಂತೆ...' ಹೇಮಂತ ಲೇವಡಿ ಮಾಡುತ್ತಲೇ ಮಾತು ಆರಂಭಿಸಿದ.

'ಈ ಕೋಟೆ ಬಂಗ್ಲೆಗೆ ನಾನು ಭಾವೀ ಅಳಿಯನಾದ್ಮೇಲೆ ವಿಪರೀತಗಳು ನಡೆಯಲು ಆರಂಭವಾಯ್ತಲ್ಲ....ಇದರ ಹಿಂದೆ ಯಾರಿರಬಹುದೆಂದು ನಾನು ಆಗ್ಲೇ ಪತ್ತೆ ಮಾಡಲು ಶುರು ಮಾಡ್ದೆ, ಕಲಾವತಿ ಆಂಟಿಯ ಬಗ್ಗೆ ಮೊದಲು ಅನುಮಾನವಿದ್ದದ್ದು ನಿಜ, ಆಕೆಯ ಬಗ್ಗೆ ಮಾಹಿತಿಗಳನ್ನು ಕಲೆ ಹಾಕ್ದೆ, ಆಗ ಆಕೆ ಅಮಾಯಕಳು ಅಂತ ತಿಳೀತು. ಕೋಟೆ ಬಂಗಲೆಯ ಯೋಗಕ್ಷೇಮವನ್ನಷ್ಟೇ ಬಯಸುವ ಸಾಧು ಸ್ವಭಾವದ ಮಹಿಳೆ ಆಕೆ. ಆಗ ನನ್ನ ಅನುಮಾನ ಚಂದ್ರಪ್ಪ–ಸುಂದರಿಯರ ಮೇಲೆ ಹಾಗೂ ಪುರುಷೋತ್ತಮರ ಮೇಲೆ ತಿರುಗಿತು. ತಮ್ಮ ಬಂಗಲೆಯ ಶ್ರೀಗಂಧದ ಮರವನ್ನು ತಾವೇ ಕಡಿಸಿ ಹಾಕಿ ಅದನ್ನು ಏಕಾಂತವಾದ ಜಾಗವೊಂದರಲ್ಲಿ ದಾಸ್ತಾನು ಮಾಡಿದ್ದನ್ನು ನನ್ನ ಅಸಿಸ್ಟೆಂಟ್ಸ್ ಪತ್ತೆ ಮಾಡಿದ್ಮೇಲೆ ನನಗೆ ಪುರುಷೋತ್ತಮರ ಮೇಲೆ ಅನುಮಾನ ಹೆಚ್ಚಾಗ ತೊಡಗಿತ್ತು. ಆ ದಿನ ನಾನು ಕೋಟೆ ಬಂಗ್ಲೆಗೆ ಭೇಟಿ ನೀಡಿ ನಮ್ಮ ಮನೆಗೆ ರಾತ್ರಿ ಹಿಂದಿರುಗುತ್ತಿರುವಾಗ ವ್ಯಕ್ತಿಯೊಬ್ಬ ನನ್ನ ಮೇಲೆ ಅಟ್ಯಾಕ್ ಮಾಡ್ದ, ಆತ ಪುರುಷೋತ್ತಮನ ಕಡೆಯವರು ಎಂದು ನನಗೆ ನಂತರ ಗೊತ್ತಾಯ್ತು, ನಾನು ಬಂಗಲೆಯ ಅಳಿಯನಾಗದಂತೆ ತಡೆಯುವ ಅವರ ಉದ್ದೇಶವಾದರೂ ಏನಿರಬಹುದೆಂಬ ಕುತೂಹಲ ಮೂಡಿತು. ಇವನ್ನೆಲ್ಲಾ ನಾನು ಖುತುವಿಗೆ ಹೇಳಲಿಲ್ಲ, ಏಕೆಂದ್ರೆ ಮೊದ್ಲೇ ಸೂಕ್ಷ್ಮ ಸ್ವಭಾವದ ಮಗುವಿನಂತಹ ಹುಡುಗಿ ಅವ್ಳು. ಇವನ್ನೆಲ್ಲಾ ಹೇಳಿದ್ರೆ ಅವ್ಳು ಗಾಬರಿಯಾಗ್ತಾಳೆ ಅಂತ ಮೊದಲಿನಿಂದ್ಲೂ ಕಲಾವತಿಯ ಬಗ್ಗೆಯೇ ಅನುಮಾನ ಹುಟ್ಟುವಂತೆ ಮಾತಾಡ್ತಿದ್ದೆ. ನಿನ್ನೆ ಖುತು ನೆಲಮಾಳಿಗೆಯ ರಹಸ್ಯದ ಬಗ್ಗೆ ಹೇಳ್ದಾಗ ತಡಮಾಡದೆ ಈ ಎಲ್ಲಾ ವಿಷಯಗಳನ್ನು ಅಜಯ್‌ಗೆ ಹೇಳ್ದೆ, ಖುತುವಿಗೆ ನೆಲಮಾಳಿಗೆಯ ವಿಷಯ ಗೊತ್ತಾಗಿರುವುದು ನಿಮಗೇನಾದರೂ ತಿಳಿದರೆ ನೀವು ನನ್ನ ಪ್ರಾಣಕ್ಕೆ ಅಪಾಯ ಮಾಡುವ ಅವಕಾಶವಿದೆಯೆನ್ನಿಸಿ ಪೊಲೀಸರ ನೆರವನ್ನು ಪಡೆದೆ. ನೀವು ಸುಪಾರಿ ಕೊಟ್ಟವರು ರಾತ್ರೋ ರಾತ್ರಿ ನಮ್ಮ ಮನೆಗೆ ಬಂದ ಕೂಡ್ಲೇ ಕಾವಲಿದ್ದ ಪೊಲೀಸರು ಅವ್ರನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ..' ಎಂದ ಹೇಮಂತ ಮುಂದೆ ಬಂದು ಛಟೀರನೆ ಪುರುಷೋತ್ತಮರ ಕೆನ್ನೆಗೆರೆಡು ಬಾರಿಸಿದ.

'ಇದು ನನ್ನ ಹುಡುಗಿ ಖುತುವನ್ನು ಇಷ್ಟು ವರ್ಷ ಕಾಡಿಸಿದ್ದಕ್ಕೆ ನನ್ನ ಕೈಲಾದ ಟ್ರೀಟ್ ಅಷ್ಟೇ, ನೀವು ನನ್ನನ್ನು ಏನೆಂದು ತಿಳಿದುಕೊಂಡ್ರಿ ಪುರುಷೋತ್ತಮ್, ನಿಮ್ಮಂಥ ಎಷ್ಟು ಜನ ಕ್ರಿಮಿನಲ್‌ಗಳನ್ನು ನಾನು ನೋಡಿಲ್ಲ, ನೀವು ಒಂದು ಹೆಜ್ಜೆ ಮುಂದಿಟ್ರೆ ನಾನು ಹತ್ತು ಹೆಜ್ಜೆ ಮುಂದಿಡ್ತೀನಿ...' ರೋಷದಿಂದ ತುಟಿ ಕಚ್ಚಿದ ಹೇಮಂತ.

ಅಜಯ್ ಕುಲಕರ್ಣಿ ಹೊರಡಲು ಅನುವಾದಾಗ ಅವನ ಜೊತೆಗೆ ತಲೆತಗ್ಗಿಸಿ ನಿಂತಿದ್ದ ಪುರುಷೋತ್ತಮರನ್ನು ನೋಡಿದಳು ಖುತು. 'ಪಪ್ಪ....ನೀವು ಈ ಕೋಟೆ ಬಂಗ್ಲೆಗೆ ಮಾಡಿರುವ ದ್ರೋಹ ಕ್ಷಮಿಸಲು ಸಾಧ್ಯವಾಗದೇ ಇರುವಂಥದ್ದು, ನನ್ನ ತಾಯೀನ 20 ವರ್ಷಗಳ ಕಾಲ ಜೀವಂತ ಶವವನ್ನಾಗಿ ಮಾಡಿದ್ದೂ ಅಲ್ದೆ ಅವಳು ಡ್ರೈವರಿನ ಹಿಂದೆ ಓಡಿಹೋದವ್ಳು ಎಂಬ ಕಳಂಕ ವನ್ನೂ ಅವಳಿಗೆ ಬರುವ ಹಾಗೆ ಮಾಡಿದ್ರಿ, ನಿಮ್ಮ ಕ್ರೌರ್ಯಕ್ಕೆ ಕಾರಿನ ಡ್ರೈವರ್ ಬಲಿಯಾಗಿ ಬಂಗಲೆಯ ಹೂದೋಟದ ಮಣ್ಣಾಗಿ ಮಲಗಿದ. ಆದ್ರೂ ಪಪ್ಪ... ತೋರಿಕೆಗಾದ್ರೂ ತಂದೆಯಾಗಿ ನೀವು ನನ್ನ ವಾತ್ಸಲ್ಯದಿಂದ್ಲೇ ಬೆಳೆಸಿದ್ರಿ, ಇಷ್ಟು ವರ್ಷಗಳ ಕಾಲ ನನ್ನ ಜೋಪಾನ ಮಾಡಿದ್ರಿ, ಅದನ್ನು ನಾನ್ಯಾವತ್ತೂ ಮರೆ ಯಲ್ಲ, ಇನ್ನು ಜೈಲಿನಲ್ಲಿ ನೀವು ಕಳೆಯುವ ದಿನಗಳಲ್ಲಿ ಒಂದು ಸಾರಿಯಾದ್ರೂ ನೀವು ಮಾಡಿದ ಪಾಪಕೃತ್ಯಗಳಿಗೆ ಪಶ್ಚಾತ್ತಾಪವಾದ್ರೆ ನನಗಷ್ಟೇ ಸಾಕು..'

ಖುತು ಬಿಕ್ಕಿದಳು. ಪುರುಷೋತ್ತಮರ ಕಂಗಳಲ್ಲೂ ಕಂಬನಿಯ ಒರತೆಯಿತ್ತು. ತಲೆತಗ್ಗಿಸಿ ಅಜಯ್ ಕುಲಕರ್ಣಿಯೊಂದಿಗೆ ನಡೆದುಬಿಟ್ಟರು.

ಖುತುವನ್ನೂ, ಅವಳ ತಾಯಿ ಹೇಮಲತಾಳನ್ನೂ ಬಿಡುಗಡೆ ಮಾಡಿ ಬಂಗಲೆಯ ಮೇಲ್ಭಾಗಕ್ಕೆ ಕರೆದುಕೊಂಡು ಬರಲಾಯಿತು.

ಕಲಾವತಿಗೂ ನಡೆದ ವಿಷಯ ತಿಳಿಯಿತು. ಕಳೆದ 20 ವರ್ಷಗಳಿಂದ ಆಡಬಾರದ ಆಟಗಳನ್ನೆಲ್ಲಾ ಕೋಟೆ ಬಂಗಲೆಯಲ್ಲಿ ಆಡಿ, ಈಗ ತಲೆತಗ್ಗಿಸಿಕೊಂಡು ಹೋಗುತ್ತಿರುವ ಗಂಡನತ್ತ ಆಕೆ ಕಣ್ತುಂಬಿಕೊಂಡೇ ನೋಡಿದಳು. ಬಂಗಲೆಯ ವಾಚ್ಮನ್ ಚಂದ್ರಪ್ಪ ಹಾಗೂ ಸುಂದರಿಯನ್ನೂ ಬಂಧಿಸಲಾಯಿತು. ಅವರನ್ನೆಲ್ಲಾ ಕಳುಹಿಸಿ ಹೇಮಂತ ಬಂಗಲೆಯಲ್ಲೇ ಉಳಿದ. ಕಲಾವತಿ ತನ್ನ ತಾಯಿಯ ಪಕ್ಕದಲ್ಲಿ ಆಘಾತಗೊಂಡಂತೆ ನಿಂತಿದ್ದ ಖುತುವನ್ನು ಬಾಚಿ ತಬ್ಬಿದಳು.

'ಅಯ್ಯೋ ನನ್ನ ಕಂದ, ಈ ಕೆಟ್ಟ ಮನುಷ್ಯ ಆಡಿದ ನಾಟಕವನ್ನ ನಿಜಾಂತ ನಂಬಿ ನಿನ್ನ ಮನಸ್ಸನ್ನು ನೋಯ್ಸಿಬಿಟ್ಟೆ ಖುತು, ಸಾಧ್ಯವಾದ್ರೆ ನನ್ನ ಕ್ಷಮಿಸು....' ಕಲಾವತಿ ಜೋರಾಗಿ ಅತ್ತಾಗ ಖುತುವೇ ಆಕೆಯನ್ನು ಸಮಾಧಾನ ಪಡಿಸಬೇಕಾಯಿತು.

ಬೆಳಕಿನಲ್ಲಿ ಹೇಮಲತಾಳನ್ನು ನೋಡಿ ಎಲ್ಲರೂ ಆಘಾತಗೊಂಡರು. ಕೊಳಕಾದ ದೇಹ, ಕೊಳಕು ಸೀರೆ, ಬಿಚ್ಚಿರುವ ತಲೆಗೂದಲು ಸಿಕ್ಕಾಗಿ ಜಡೆಗಟ್ಟಿ ಹೋಗಿತ್ತು. ಕೈ ಕಾಲಿನ ಉಗುರುಗಳು ಉದ್ದುದ್ದವಾಗಿ ಬೆಳೆದು ತಿರುಚಿ ಹೋಗಿದ್ದವು. ಆಕೆಯೇ ಈ ಕೋಟೆ ಬಂಗಲೆಯ ಮಹಾರಾಣಿಯೆಂದು ನಂಬುವುದು ಕಷ್ಟಸಾಧ್ಯವಾಗಿತ್ತು.

'ಪಾಪಿಗಳು....ನಿನ್ನ ತಾಯಿಗೆ ಎಂಥ ಗತಿ ತಂದಿಟ್ರು ನೋಡು ಖುತು, ಇವನ್ನೆಲ್ಲಾ ನೋಡೋಕೆ ನಾನಿನ್ನು ಬದುಕಿದ್ದೀನಿ ಅಂತ ಕಾಣುತ್ತೆ, ಮಗ ನೋಡಿದರೆ ಹಾಗಾದ, ಗಂಡ ನೋಡಿದ್ರೆ ಹೀಗೆ....ನಾನಿನ್ನು ಯಾರಿಗಾಗಿ ಬದುಕಿರ್ಲಿ ಖುತು..' ಕಲಾವತಿ ಬಿಕ್ಕಿದಾಗ ಖುತು ಮೃದುವಾಗಿ ಆಕೆಯ ಕಣ್ಣೊರೆಸಿದಳು.

'ಚಿಕ್ಕಮ್ಮಾ, ನೀನು ನಂಗೋಸ್ಕರ ಬದುಕ್ಬೇಕು, ಅವತ್ತು ನೀನು ಬಂಗಲೆಗೆ ಕಾಲಿಟ್ಟ ದಿನ ಅಮ್ಮನನ್ನೇ ಮತ್ತೆ ನೋಡಿದ ಅನುಭವ ನನಗಾಗಿತ್ತು. ಯಾವತ್ತೂ ಈ ಬಂಗಲೆಗೆ, ಈ ಬಂಗಲೆಯ ಜನಗಳಿಗೆ ಒಳ್ಳೆಯದನ್ನೇ ಬಯಸಿದ ನೀನಿನ್ನು ಅಳಬಾರ್ದು, ಈ ಕೋಟೆ ಬಂಗ್ಲೇಲಿ ನನ್ನ ಜೊತೇನೇ ಇರ್ಬೇಕು.' ಎಂದು ಖುತು ಆಕೆಯನ್ನಪ್ಪಿಕೊಂಡಾಗ ಹೇಮಂತನಿಗೂ ಕಣ್ತುಂಬಿ ಬಂದಿತು.

'ಖುತು, ರಮ್ಯಾಳಿಗೂ ವಿಷಯ ತಿಳಿಸಿದ್ದೀನಿ, ನಿಮ್ಮ ಅಪ್ಪಾಜಿಯನ್ನು ಕರೆದುಕೊಂಡು ಆದಷ್ಟು ಬೇಗ ಇಲ್ಲಿಗೆ ಬರ್ತೀನಿ ಅಂತ ಹೇಳಿದ್ದಾರೆ....' ಸಾವರಿಸಿಕೊಂಡು ಹೇಮಂತ ಹೇಳಿದಾಗ ಕಲಾವತಿ ಚುರುಕಾದಳು.

'ಹೇಮಂತ, ಹಾಗಾದ್ರೆ ನೀನಿಲ್ಲೇ ಊಟಕ್ಕೆ ನಿಂತು ಬಿಡು, ನಾನು, ಖುತು ಮೊದ್ಲು ಹೇಮಲತಾಳಿಗೆ ಸ್ನಾನ ಮಾಡ್ಸಿ ಬೇರೆ ಕೆಲ್ಸದ ಕಡೆಗೆ ಗಮನ ಕೊಡ್ತೀವಿ....' ಆಕೆಯೆಂದಾಗ ಹೇಮಂತನೂ ಒಪ್ಪಿದ.

ಸ್ವಲ್ಪ ಹೊತ್ತಿಗೆಲ್ಲಾ ಮಂಗಳ ಸ್ನಾನ ಮಾಡಿಸಿಕೊಂಡು, ಶುಭ್ರವಾದ ಸೀರೆಯನ್ನುಡಿಸಿಕೊಂಡು ಬಂದಳು ಹೇಮಲತಾ. ಆಕೆಯ ನೈಜ ಸೌಂದರ್ಯವನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಸಂಜೆಯ ವೇಳೆಗೆ ರಮ್ಯ ತನ್ನ ತಂದೆ ಹರಿಕೃಷ್ಣರೊಂದಿಗೆ ಕೋಟೆ ಬಂಗಲೆಗೆ ಆಗಮಿಸಿದಳು. 20 ವರ್ಷಗಳಿಂದ ಕೋಟೆ ಬಂಗಲೆಯ ನೆಲಮಾಳಿಗೆಯಲ್ಲಿ ಅಜ್ಞಾತವಾಸ ಮಾಡಿ, ಮಾನಸಿಕ ಆಘಾತಕ್ಕೆ ಒಳಗಾಗಿರುವ ಹೇಮಲತಾಳತ್ತ ಹರಿಕೃಷ್ಣರು ಸಂಕಟದಿಂದಲೇ ನೋಡಿದರು. ತಮ್ಮ ಮಧುರ ದಾಂಪತ್ಯದ ನೆನಪಾಗಿ ಅವರ ಕಂಗಳು ತೇವಗೊಂಡವು.

'ಹೇಮ....ಯಾವ್ದು ಹೇಗೇ ನಡೆದಿರ್ಲಿ, ನೀನ್ಯಾವತ್ತೂ ನನ್ನ ಪ್ರೀತಿಯ ಹೇಮಳೇ ಕಣೇ, ನಿನ್ನನ್ನು ನಂದಿಗೆ ಕರ್ಕೊಂಡು ಹೋಗಿ ಅಲ್ಲಿ ಯೋಗ ಚಿಕಿತ್ಸೆ ಕೊಡಿಸ್ತೀನಿ, ನಿನ್ನನ್ನು ಮತ್ತೆ ಮೊದಲಿನ ಹಾಗೆ ಖಂಡಿತಾ ಮಾಡ್ತೀನಿ...' ಹರಿಕೃಷ್ಣರು ಭಾವುಕರಾಗಿ ಮಾತನಾಡಿದರು. ಹೇಮಲತಾಳಿಗೆ ಅದೆಷ್ಟು ಅರ್ಥವಾಯಿತೋ ಗೊತ್ತಿಲ್ಲ, ಅವರ ಹತ್ತಿರ ಬಂದು ಅವರ ಭುಜಕ್ಕೆ ತನ್ನ ತಲೆಯನಿಸಿ ನಿಂತಳು.

ಈಗ ಹರಿಕೃಷ್ಣರು ಮಗಳು ಖುತುವಿನತ್ತ ತಿರುಗಿದರು. 'ಮಗು....ನೀನು ನನ್ನ ಮಗಳಾಗಿ ಹುಟ್ಟಿದ್ದಕ್ಕೆ ನಿನ್ನ ಋಣವನ್ನು ತೀರಿಸಿಕೊಂಡು ಬಿಟ್ಟೆ, ರಮ್ಯಾಳಿಗೆ ತಕ್ಕ ಸಂಗಾತಿ ಹುಡುಕಿದೆ, ನನಗೆ ನನ್ನ ಹೇಮಳನ್ನು ಪುನಃ ದೊರಕಿಸಿಕೊಟ್ಟೆ..' ಎಂದವರು ಬಾಗಿ ಅವಳ ಹಣೆಯನ್ನು ಚುಂಬಿಸಿದರು.

'ಇಂಥಾ ದೊಡ್ಡ ಮಾತುಗಳೆಲ್ಲಾ ಯಾಕೆ ಅಪ್ಪಾಜಿ, ಇಷ್ಟು ದಿನ ನಾನು ದುರಾದೃಷ್ಟವಂತೆ ಎಂದು ಯಾವಾಗ್ಲೂ ಕೊರಗ್ತಿದ್ದೆ, ಆದ್ರೆ ಈ ಪ್ರಪಂಚದಲ್ಲಿ ಎಲ್ಲರಿಗಿಂತ ನಾನೇ ಅದೃಷ್ಟವಂತೆ ಅಂತ ಈಗ ಅನ್ನಿಸ್ತಿದೆ, ಅಪ್ಪಾಜಿಯಾಗಿ ನೀವು ಸಿಕ್ಕಿದ್ರಿ, ಗೆಳತಿಯಾಗಿ, ಸಹೋದರಿಯಾಗಿ ರಮ್ಯ ಸಿಕ್ಕಿದ್ಳು, ನಾನು ಚಿಕ್ಕಂದಿನಿಂದ ಪ್ರೀತಿಸಿದ ನನ್ನ ಹೇಮಂತ ಸಿಕ್ಕಿದ...ಎಲ್ಲಕ್ಕಿಂತ ಹೆಚ್ಚಾಗಿ ನನಗೀಗ ಇಬ್ಬರು ಅಮ್ಮಂದಿರು ಸಿಕ್ಕಿದ್ದಾರೆ..' ಖುತುವೂ ಭಾವುಕಳಾಗಿ ಮಾತನಾಡಿದಳು.

ಕೋಟೆ ಬಂಗಲೆಯಲ್ಲಿ ಸ್ವಲ್ಪ ಹೊತ್ತಿದ್ದು ಹರಿಕೃಷ್ಣರು ಹೇಮಲತಾ ಹಾಗೂ ರಮ್ಯಾಳೊಂದಿಗೆ ಹೊರಟೇಬಿಟ್ಟರು.